

## ಪ್ರಿಯಾಂಕಾ ದಾಖಲೆ

ಪ್ರಿಯಾಂಕಾ ಚೋಪ್ರಾ ಏರಿರುವ ಎತ್ತರವನ್ನು ನೋಡಿ ಬಾಲಿವುಡ್ ಮೂಗಿನ ಮೇಲೆ ಬೆರಳಿಟ್ಟಿದೆ. ಹಾಲಿವುಡ್ ನಲ್ಲಿ ಸಖತ್ ಬ್ಯುಸಿ ಆಗಿರುವ ಪ್ರಿಯಾಂಕಾ ಸದ್ಯಕ್ಕೆ ಹಿಂದಿ ಚಿತ್ರರಂಗದಲ್ಲಿ ಹೊಸ ಸಿನಿಮಾಗಳನ್ನು ಒಪ್ಪಿಕೊಳ್ಳುವಾಗ ತುಂಬಾ ಚ್ಯೂಸಿ ಆಗಿದ್ದಾಳಂತೆ. ಐದಾರು ನಿರ್ಮಾಪಕರು ಪ್ರಿಯಾಂಕಾ ಕಾಲ್ ಷೀಟ್ ಪಡೆಯಲು ತುದಿಗಾಲಲ್ಲಿ ನಿಂತಿದ್ದರೂ ಆಕೆಯ ದುಬಾರಿ ಸಂಭಾವನೆಯಿಂದಾಗಿ ಹಿಂಜರಿದಿದ್ದಾರೆ ಎನ್ನುವ ಸುದ್ದಿಯೂ ಇದೆ. 'ಇದು ಕೇವಲ ಸಂಭಾವನೆಯ ವಿಷಯ ಅಲ್ಲ. ಚಿತ್ರಕಥೆ ಚೆನ್ನಾಗಿದ್ದರೆ, ಸವಾಲೆನ್ನಿಸುವ ಪಾತ್ರ ಇದ್ದರೆ ಖಂಡಿತಾ ಒಪ್ಪಿಕೊಳ್ಳುತ್ತೇನೆ' ಎನ್ನುವುದು ಪ್ರಿಯಾಂಕಾ ಮಾತು.

ಈ ಮಧ್ಯೆ ಮುಂಬೈಯಲ್ಲಿ ಸಿನಿ ಪ್ರಶಸ್ತಿ ಸಮಾರಂಭವೊಂದರಲ್ಲಿ ವೇದಿಕೆಯ ಮೇಲೆ ಕುಣಿಯಲು ಪ್ರಿಯಾಂಕಾ ಒಪ್ಪಿಕೊಂಡಿರುವ ಸುದ್ದಿ ಬಂದಿದೆ. ಅರ್ಧ ಗಂಟೆಯ ಎರಡು ಕುಣಿತಗಳಿಗೆ ಪ್ರಿಯಾಂಕಾ ಪಡೆಯುತ್ತಿರುವ ಸಂಭಾವನೆ ಬರೋಬ್ಬರಿ 12 ಕೋಟಿ ರೂಪಾಯಿ ಎನ್ನುವುದು ಅನಧಿಕೃತ ಮೂಲಗಳ ಸುದ್ದಿ. 'ಅಯ್ಯೋ ಇಷ್ಟು ಹಣದಲ್ಲಿ ಒಂದು ಹೊಸ ಸಿನಿಮಾನೇ ತೆಗೆಯಬಹುದಿತ್ತಲ್ಲ.' ಎಂದು ಕೆಲವು ಬಡ ನಿರ್ಮಾಪಕರು ಗೊಣಗಿದರಂತೆ. ಹಿಂದಿಯಲ್ಲಿ ಈಗ ಹೊಸ ಸಿನಿಮಾಗಳು 12 ಕೋಟಿಯಲ್ಲಿ ನಿರ್ಮಾಣ ಆಗಲಿಕ್ಕಿಲ್ಲ. ಆದರೆ ಕೆಲವು ಟಾಪ್ ಫೈವ್ ನಾಯಕಿಯರೂ ಇಷ್ಟೊಂದು ಹಣವನ್ನು ಇಡೀ ಸಿನಿಮಾದ ನಟನೆಗೆ ಸಂಭಾವನೆಯಾಗಿ ಪಡೆಯುತ್ತಿಲ್ಲ ಎನ್ನುವುದಂತೂ ನಿಜ.



## ದೀಪಿಕಾ ಮೂಗು

ರಾಣಿ ಪದ್ಮಾವತಿಯ ಗದ್ದಲ ಜೋರಾಗಿದೆ. ಸಿನಿಮಾ ಬಿಡುಗಡೆಯ ದಿನಾಂಕ ಹತ್ತಿರವಾದಂತೆಯೇ ಪ್ರತಿಭಟನೆಯ ಕಾವೂ ಹೆಚ್ಚಿದೆ. ಉತ್ತರದ ಹಿಂದಿ ಬೆಲ್ಟ್ ಮಾತ್ರವಲ್ಲ, ದಕ್ಷಿಣದ ಬೆಂಗಳೂರಿನಲ್ಲೂ ಪದ್ಮಿನಿಯ ಕುಲಬಾಂಧವರು ಪ್ರತಿಭಟಿಸಲು ಮೆರವಣಿಗೆ ತೆಗೆದಿದ್ದಾರೆ. ಯಾರೋ ಒಬ್ಬರು ಪದ್ಮಿನಿಯ ಪಾತ್ರ ನಿರ್ವಹಿಸಿದ ದೀಪಿಕಾಳ ಮೂಗು ಕತ್ತರಿಸುವುದಾಗಿ ಅಬ್ಬರಿಸಿದ್ದಾರೆ. ಇನ್ನಾರೋ ಒಬ್ಬರು ದೀಪಿಕಾ ತಲೆ ಕತ್ತರಿಸಿ ತಂದರೆ ಎಷ್ಟೋ ಕೋಟಿ ಕೊಡುವುದಾಗಿ ಕೂಗಾಡಿದ್ದಾರೆ. ಸದ್ಯಕ್ಕೆ ದೀಪಿಕಾ ಹೋದಲ್ಲಿ ಬಂದಲ್ಲಿ ಪೊಲೀಸರ ಭದ್ರತೆ ಬಿಗಿಯಾಗಿದೆ.

ಈ ಬೆದರಿಕೆಗಳಿಂದ ದೀಪಿಕಾ ಮಾತ್ರ ವಿಚಲಿತಗೊಂಡಿಲ್ಲ. ಭಯ ಎನ್ನುವ ಭಾವ ನನ್ನಲ್ಲಿ ಯಾವತ್ತೂ ಸುಳಿದಿಲ್ಲ ಎಂದಿದ್ದಾಳೆ ಆಕೆ. 'ಚರಿತ್ರೆಯ ಪಾತ್ರಗಳನ್ನು ನಿರ್ದೇಶಕರು ಹೇಗೆ ರೂಪಿಸುತ್ತಾರೋ ಅದಕ್ಕೆ ತಕ್ಕಂತೆ ಜೀವ ತುಂಬುವುದಷ್ಟೇ ನನ್ನ ಕೆಲಸ' ಎನ್ನುವುದು ಆಕೆಯ ಸ್ಪಷ್ಟನುಡಿ.

ಸಿನಿಮಾ ಒಂದು ಸೃಜನಶೀಲ ಮಾಧ್ಯಮ. ಅದನ್ನು ಸಿನಿಮಾ ಆಗಿಯೇ ನೋಡಬೇಕು ಎನ್ನುವುದು ಪ್ರಾಜ್ಞರ ಮಾತು. ಆದರೆ ನಮ್ಮಲ್ಲಿ ಅದನ್ನೂ ಮೀರಿ ರಾಜಕೀಯವಾಗಿ ನೋಡುವ ಪ್ರವೃತ್ತಿ ಹೆಚ್ಚಾಗಿದೆ.

■ ಬಿಂದು